**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 533/2026**

ಫಿರ್ಯಾದಿ : ರಾಜ್ಯದ ಪರವಾಗಿ ಸಂಚಾರ ಪೊಲೀಸ್ ಠಾಣೆ,
ಚಾಮರಾಜನಗರ

**ವಿರುದ್ಧ**

ಆರೋಪಿ : ಮಿಸಾಲ್ ಜಮಾನ್ ಬಿನ್ ಉಸ್ಮಾನ್,
ವಯಸ್ಸು 20 ವರ್ಷ,
ವಾಸಃ ಕೋಜಿಕೋಡೆ ಗ್ರಾಮ, ಕೇರಳ.

## ಆಪಾದನೆ

ಶ್ರೀ ಪ್ರಕಾಶ್ ಸಿ.ಡಿ., ಬಿ.ಎ., ಎಲ್.ಎಲ್.ಬಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ, ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

ದಿಃ 16.11.2025 ರಂದು ಮಃ 12.30 ಗಂಟೆ ಸಮಯದಲ್ಲಿ ಚಾಮರಾಜನಗರ ಸಂಚಾರ ಪೊಲೀಸ್ ಠಾಣೆಗೆ ಸರಹದ್ದಿಗೆ ಸೇರಿದ ಉಡಿಗಾಲ ಗ್ರಾಮದಲ್ಲಿರುವ ದೇವಸ್ಥಾನದ ಮುಂಭಾಗದಲ್ಲಿ ಹಾದಿರುವ ಚಾಮರಾಜನಗರ–ಗುಂಡ್ಲುಪೇಟೆ ರಸ್ತೆಯಲ್ಲಿ ಸಾಕ್ಷಿ–2ರವರು ವಾಹನ ನೊಂದಣಿ ಸಂಃ ಕೆಎ–10–ಎಕ್ಸ್–8377ರ ಮೋಟಾರ್ ಸೈಕಲ್ ನಲ್ಲಿ ಚಾಮರಾಜನಗರ ಕಡೆಯಿಂದ ಉಡಿಗಾಲದ ಕಡೆಗೆ ಬರುತ್ತಿದ್ದಾಗ, ಆರೋಪಿಯಾದ ನೀವು ವಾಹನ ನೊಂದಣಿ ಸಂಃ ಕೆಎಲ್ –54–ಎಫ್–3778ರ ಮೋಟಾರ್ ಸೈಕಲನ್ನು ಅತಿವೇಗ ಮತ್ತು ಅಜಾರೂಗತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ–02ರವರ ಮೋಟಾರ್ ಸೈಕಲ್ ಗೆ ಡಿಕ್ಕಿ ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.281 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

...2

2. ಅದೇ ದಿನ, ಸ್ಥಳ, ಸಮಯದಂದು, ಆರೋಪಿಯಾದ ನೀವು ವಾಹನ ನೊಂದಣಿ ಸಂಃ ಕೆಎಲ್ -54-ಎಫ್-3778ರ ಮೋಟಾರ್ ಸೈಕಲನ್ನು ಅತಿವೇಗ ಮತ್ತು ಅಜಾರೂಗತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ-02ರವರ ಮೋಟಾರ್ ಸೈಕಲ್ ಗೆ ಡಿಕ್ಕಿ ಮಾಡಿದ ಪರಿಣಾಮವಾಗಿ, ಸಾಕ್ಷಿ-02 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 125(ಎ)ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

3. ಅದೇ ದಿನ, ಸ್ಥಳ, ಸಮಯದಂದು, ಆರೋಪಿಯಾದ ನೀವು ವಾಹನ ನೊಂದಣಿ ಸಂಃ ಕೆಎಲ್ -54-ಎಫ್-3778ರ ಮೋಟಾರ್ ಸೈಕಲನ್ನು ಅತಿವೇಗ ಮತ್ತು ಅಜಾರೂಗತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ-02ರವರ ಮೋಟಾರ್ ಸೈಕಲ್ ಗೆ ಡಿಕ್ಕಿ ಮಾಡಿದ ಪರಿಣಾಮವಾಗಿ, ಸಾಕ್ಷಿ-02 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 125(ಬಿ)ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

**ಪ್ರಶ್ನೆಃ 1.** ಓದಿ ಹೇಳಿದುದು ಅರ್ಥವಾಯಿತೇ?

**ಉತ್ತರಃ** ಹೌದು

**ಪ್ರಶ್ನೆಃ 2.** ಶಿಕ್ಷೆಗೆ ಒಪ್ಪುತ್ತೀರೋ ಅಥವಾ ವಿಚಾರಣೆಯಾಗಬೇಕಾ?

**ಉತ್ತರಃ** ತಪ್ಪಾಯಿತು.

ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ವಿವರಿಸಲಾಗಿ, ಆರೋಪಿ ಅರ್ಥಮಾಡಿಕೊಂಡು ನೀಡಲಾದ ಉತ್ತರವನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 03.06.2026

(ಪ್ರಕಾಶ್ ಸಿ.ಡಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ.,
ಚಾಮರಾಜನಗರ.

ಆರೋಪಿಯ ಸಹಿಃ